Vachan Sahityadalli Jeevana Moulyagalu.

# ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು

- ಪುಂಡಲೀಕ ಮಾದರ

ಸಾಮರಸ್ಯ ಮತ್ತು ಸಹಜೀವನ ತತ್ವಗಳನ್ನು ಆದರ್ಶಗಳಾಗಿ ನಂಬಿದ ಶರಣರು ಪ್ರಪಂಚ-ಪಾರಮಾರ್ಥ, ಸಂಸಾರ-ಸನ್ಯಾಸ ಇತ್ಯಾದಿ ಪಾರಂಪರಿಕ ವೈರುಧ್ಯಗಳಿಗೆ ಸಾಮರಸ್ಯದ ಬೆಸುಗೆ ಹಾಕಿ ಇಹದ ಬದುಕಿಗೆ ಘನತೆ ಅರ್ಥವಂತಿಕೆ ತುಂಬಿದ ಜೀವಪರ ಚಿಂತರು. ಲಿಂಗ-ಜಾತಿ, ಜಾತಿ ಕುಲ, ವೃತ್ತಿ ವರ್ಗಗಳನ್ನು ಶ್ರೇಣೀಕರಣಗೊಳಿಸಿ ಮನುಷ್ಯ ಸಮಾಜವನ್ನು ದ್ವೀಪಗಳಾಗಿಸಿದ್ದ ಸಾಂಪ್ರದಾಯಿಕ ಜಡ ನೀತಿಗಳನ್ನು ಶರಣರು ನಿರಾಕರಿಸಿದರು. ಶ್ರೇಷ್ಠ ಕನಿಷ್ಠ ಸ್ಪರ್ಶ-ಅಸ್ಪೃಶ್ಯ ಇತ್ಯಾದಿ ವ್ಯವಸ್ಥೆಯ ಭೇದನೀತಿಯನ್ನು ತಿರಸ್ಕರಿಸಿ ಮನುಷ್ಯ ಸಂಬಂಧಗಳನ್ನು ಪ್ರೀತಿ-ವಿಶ್ವಾಸದ ಸೂತ್ರದಲ್ಲಿ ಬಂಧುರಗೊಳಿಸಿದ ವೈಚಾರಿಕತೆಯು ಶರಣರ ಚಿಂತನೆಗಳನ್ನು ಆಧುನಿಕ ಸಂದರ್ಭಕ್ಕೂ ಪ್ರಸ್ತುತವಾಗಿದೆ. ವ್ಯಕ್ತಿತ್ವ ವಿಕಾಸ, ಸಾಮಾಜಿಕ, ಸೃಜನಶೀಲತೆ ಮತ್ತು ಸಾಂಸ್ಕೃತಿಕ ಚಲನಶೀಲತೆಯನ್ನು ನಿರ್ಬಂಧಿಸಿದ ಸಮಾಜ ವಿರೋಧಿ ವಿಚಾರಗಳನ್ನು ವಿಶ್ಲೇಷಣೆಗೊಂಡಿದ್ದ ಅವರು ಭೌತಿಕ ಪ್ರಗತಿ, ನೈತಿಕ, ಉನ್ನತಿ. ಅಧ್ಯಾತ್ಮಿಕ ಜಾಗೃತಿಯುಳ್ಳ ಹೊಸ ಸಮಾಜ ನಿರ್ಮಾಣಕ್ಕಾಗಿ ಚಿಂತಿಸಿದರು.

ಸಮಾನತೆ ಸ್ವಾತಂತ್ರ್ಯ ಗುಣ ಗೌರವನ್ನು ಮನ್ನಿಸಿ ಆತ್ಮಜ್ಞಾನಕ್ಕೆ ಅಡ್ಡಗೋಡೆಗಳಾಗಿದ್ದ ಅವೈಚಾರಿಕ ಗ್ರಹಿಕೆಗಳನ್ನು ಪರಾಮರ್ಶಿಸಿದ ಶರಣರ ಸಾಮಾಜಿಕ ವಿವೇಕವು ಆಧುನಿಕ ವೈಚಾರಿಕತೆಗೆ ಹತ್ತಿರವಾಗಿದೆ. ಹೀಗೆ ಲೌಕಿಕ ಬದುಕಿನ ಗ್ರಹಿಕೆಯನ್ನು, ಆಧ್ಯಾತ್ಮಿಕತೆಯ ವ್ಯಾಖ್ಯೆಯನ್ನು ವಾಸ್ತವದ ಬೆಳಕಿನಲ್ಲಿ ಮರುಪರಿಶೀಲಿಸಿ, ಪರದ ಚಿಂತನೆಗಳನ್ನು ಇಹದ ಬದುಕಿನಲ್ಲಿ ಸಾಕಾರವಾಗಿಸಿದುದು ಶರಣರ ಜೀವನ ಶ್ರದ್ಧೆಯ ಪ್ರತೀಕ ವೇದ-ಉಪನಿಷತ್ತುಗಳ ಕಾಲದಿಂದ ಸಾಗಿಬಂದಿದ್ದ ಸ್ವರ್ಗಕೇಂದ್ರಿತ, ಲೋಕವಿರೋಧಿ ಆಧ್ಯಾತ್ಮಿಕ ಧೋರಣೆಗಳನ್ನು ಪರಲೋಕದ ಅತೀಂದ್ರಿತೆಯ ನೆಲೆಯಿಂದ ಇಹಲೋಕದ ವಾಸ್ತವ ಬದುಕಿಗೆ ಅಭಿಮುಖ ಗೊಳಿಸಿದವರು ಶರಣರು. ಇಹ, ಪರ-ಸಂಸಾರ-ಸನ್ಯಾಸಿಗಳನ್ನು ವೈರುಧ್ಯದ ನೆಲೆಯಲ್ಲಿ ವ್ಯಾಖ್ಯಾನಿಸುತ್ತಾ ಅವೆರಡನ್ನು ಜೀವನ ಪ್ರತ್ಯೇಕ ಜಗತ್ತುಗಳನ್ನಾಗಿಸಿ ಪರಸ್ಪರ ನಿರಾಕರಣೆಯಿಂದ ಮಾತ್ರವೇ ಸಾಧಿಸುವಾಗುವ ವಿರುದ್ಧ ಧ್ರುವಗಳನ್ನಾಗಿಸಿದ್ದ ಜೀವವಿರೋಧಿ ವೈಚಾರಿಕತೆಗೆ ಶರಣರ ಪ್ರತಿಕ್ರಿಯೆ ವಿಭಿನ್ನವಾಗಿದೆ. ಇಹದ ಬದುಕಿಗೆ ಆಧ್ಯಾತ್ಮಿಕ ಮೌಲ್ಯವನ್ನು ತುಂಬಿ ಸಾಂಪ್ರದಾಯಿಕ ಗ್ರಹಿಕೆಗಳಿಗೆ ವೈಚಾರಿಕ ತಿರುವು ನೀಡಿದ್ದು ಶರಣ ಚಳುವಳಿಯ ಮಹತ್ವ ಸಾಧನೆ.

ನೇವರು. ಹೀಗೆ ನೂರಾರು ದೇವತೆಗಳ ಕಡೆಗೆ ಚಿತ್ತವನ್ನು ಹರಿಯಬಿಟ್ಟವರಿಗೆ, ಅನುಪಮ ಆನಂದ ಸ್ವರೂಪಿಯಾದ ಆ ನಿರಂಜನ ತತ್ವವು ಗೋಚರಿಸುವುದಾರೂ ಹೀಗೆ ಎಂದು ಶರಣರು ಮರುಗಿ ಈ ಅಂಧಶ್ರದ್ಧೆಯನ್ನೂ ಕೈಕೂಲಿಯ ಭಕ್ತಿಯನ್ನು ತಿರಸ್ಕರಿಸುತ್ತಾರೆ.

**ಸೋಮವಾರ ಮಂಗಳವಾರವೆಂದು ಮಾಡುವ ಭಕ್ತನ.**

**ಲಿಂಗ ಭಕ್ತಂಗೆಂತು ಸರಿಯೆಂಬೆನಯ್ಯಾ**

**ದಿನ ಶ್ರೇಷ್ಠವೋ ಲಿಂಗ ಶ್ರೇಷ್ಠವೂ?**


ಸಾಧಕ ದಿನಗಳ ಭಕ್ತನಾಗಬಾರದು ದೈವಭಕ್ತನಾಗಬೇಕು ಎಂದು ಬಸವಣ್ಣನವರು ಹೇಳುತ್ತಾರೆ. ಹೀಗೆ ಶರಣರು ಕಂಡ ಮಾರ್ಗ, ಪೂರ್ಣಮಾರ್ಗ, ಧರ್ಮವನ್ನು ಅದರ ಪೂರ್ಣ ಸ್ವರೂಪದಿಂದ ಅವರು ಕಂಡವರು ಮತ್ತು ಆಚರಿಸಿದರು. ವ್ಯಕ್ತಿ ಸಮಾಜದಲ್ಲಿ ಬಾಳುವುದಕ್ಕೆ ಮತ್ತು ಸಮಾಜದ ಅಭ್ಯುದಯಕ್ಕೆ ಸಹಾಯಕವಾಗಬೇಕೆಂದು ಶಿವಶರಣರು ತಮ್ಮ ವಚನಗಳ ಮೂಲಕ ಜೀವನ ಮೌಲ್ಯಗಳನ್ನು ತಿಳಿಸಿಕೊಟ್ಟರು. ಹೀಗೆ ಧರ್ಮ, ಜೀವನದ ಎಲ್ಲ ರಂಗಗಳದಲ್ಲಿರುವವರಿಗೂ ಅದು ನಿಲುಕುವಂತಿರಬೇಕು ಮತ್ತು ಅದನ್ನು ಬಯಸುವ ಸರ್ವರಿಗೂ ಅಲ್ಲಿ ಸಮಾನ ಅವಕಾಶಗಳಿರಬೇಕು ಇದು ಶರಣರ ದೃಷ್ಟಿ ಈ ಮಾರ್ಗದಲ್ಲಿಯೇ ಅವರು ನಡೆದು ಧರ್ಮದ ಪೂರ್ಣ ಸ್ವರೂಪವನ್ನು ತಮ್ಮ ಜೀವನದ ಜೀವಂತ ನಿದರ್ಶನಗಳಿಂದ ಸಾಧಿಸಿ ತೋರಿಸಿದ್ದಾರೆ.

**ಗ್ರಂಥ ಋಣ**

1) ಪೂರ್ವಾಪರ- ಡಾ. ಶಾಂತಾ ಇಮ್ರಾಪೂರ
2) ವಚನ ಸಾವಿರ- ಸಂ. ಓ. ಎಲ್. ನಾಗಭೂಷಣಸ್ವಾಮಿ
3) ಶರಣರ ಅನುಭಾವ ಸಾಹಿತ್ಯ- ಡಾ. ಎಚ್. ತಿಪ್ಪೇರುದ್ರಸ್ವಾಮಿ
4) ಜೇಡರ ದಾಸಿಮಯ್ಯನ ವಚನಗಳು- ಸಂ. ಎಚ್. ದೇವೀರಪ್ಪ
5) ಫ.ಗು. ಹಳಕಟ್ಟಿ- ಶೂನ್ಯ ಸಂಪಾದನೆ.

❖❖

ಕನ್ನಡ ಸಹಾಯಕ ಪ್ರಾಧ್ಯಾಪಕರು, ಶ್ರೀಅನ್ನದಾನೇಶ್ವರ ಕಲಾ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ನರೇಗಲ್ಲ, ತಾ॥ ಗಜೇಂದ್ರಗಡ ಜಿ॥ ಗದಗ.



# ಪುನರ್ನವ

ಭಾಗ-೨

ಸಂಪಾದಕರು

ಡಾ. ಈರಣ್ಣ ಇಂಜಗನೇರಿ

ಡಾ. ಶಿವಾನಂದ ಬ. ಟವಳಿ

## ಪುನರ್ನವ ಭಾಗ-೨

| | | |
|---|---|---|
| ಸಂಪಾದಕರು | : | ಡಾ. ಈರಣ್ಣ ಇಂಜಗನೇರಿ<br>ಡಾ. ಶಿವಾನಂದ ಬ. ಟವಳಿ |
| ಪ್ರಕಾಶಕರು | : | ಬಸು ಪ್ರಕಾಶನ, ಧಾರವಾಡ,<br>ಮೊ. ೯೭೩೮೬೬೪೮೭೭ |
| ಮೊದಲಮುದ್ರಣ | : | ೨೦೨೦ |
| ಪುಟಗಳು | : | xx + ೩೧೬ |
| ಪ್ರತಿಗಳು | : | ೧೦೦೦ |
| ಹಕ್ಕುಗಳು | : | ಪ್ರಕಾಶಕರದು |
| ಬಳಸಿದ ಕಾಗದ | : | ೮೦ ಜಿ.ಎಸ್.ಎಮ್. |
| ಬೆಲೆ | : | ರೂ. ೩೦೦/- |
| ಮುಖಪುಟ ವಿನ್ಯಾಸ | : | ಶ್ರೀ ರವಿ ಗೋವನಕೊಪ್ಪ |
| ಮುದ್ರಕರು | : | ಬಿ. ಜಿ. ಪ್ರಿಂಟರ್ಸ್, ಧಾರವಾಡ. ೯೮೪೫೨ ೭೦೧೧೪ |

---

## PUNARNAVA- Part-2

| | | |
|---|---|---|
| Editors | : | **Dr. Iranna Injaganeri**<br>Lecturer, Dept. of Kannada,<br>HIPU College, Dharwad. Cell No.- 9901669309<br>**Dr. Shivanand B. Tavali**<br>Lecturer, Dept. of Kannada,<br>J.S.S. College, Dharwad. Cell No.- 9844035788 |
| Published by | : | **Basu Prakashana, Dharwad**<br>Cell No.- 9738664877<br>Email-basuprakashana@gmail.com |
| Rights | : | Publications |
| First Impression | : | 2020 |
| Copies | : | 1000 |
| Pages | : | xx + 316 |
| Price | : | 300/- |
| Size | : | 1/8 Demi |
| Paper | : | 80 GSM Maplitho |
| Printed at | : | B.G. Printers, Dharwad. 98452 70114 |
| ISBN No | : | **978-81-939340-6-7** |

# ಒಳಪುಟಗಳಲ್ಲಿ

೦೧. ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ ..1
– ಡಾ. ಶೀಲಾದೇವಿ ಎಸ್. ಮಳೀಮಠ

೦೨. ಸಾಹಿತ್ಯ : ವಿಜ್ಞಾನ – ತಂತ್ರಜ್ಞಾನ ..8
– ಡಾ. ಎಸ್. ಬಿ. ರಾಠೋಡ

೦೩. ನಂದನವನವನ್ನು ಕಾಂಕ್ರೀಟ್ ಮಾಡುವ ಮುನ್ನ ..15
– ಡಾ. ಮನೋಜ ಗೋಡಬೋಲೆ

೦೪. ಭಾರತದ ಪ್ರತಿಷ್ಠೆ ಸಂಸ್ಕೃತ – ಸಂಸ್ಕೃತಿ ..21
– ಡಾ. ರಜನಿ ಎಚ್.

೦೫. ಕನ್ನಡ ಪತ್ರಿಕೆಯಲ್ಲಿ ಅಂಕಣ ಸಾಹಿತ್ಯದ ಪ್ರಭಾವ ..26
– ಡಾ. ಯಮನೂರಪ್ಪ

೦೬. ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ..31
– ಪುಂಡಲೀಕ ಮಾದರ

೦೭. ಹೊಯ್ಸಳ ಕಲೆ ಮತ್ತು ವಾಸ್ತುಶಿಲ್ಪ ..40
– ಶಿವಾನಂದ ಜಿ.

೦೮. ಸ್ತ್ರೀವಾದ ಮತ್ತು ಮಹಿಳಾ ಅಧ್ಯಯನದ ನೆಲೆಗಳು ..45
– ಪ್ರೊ. ತುಳಸಾಬಾಯಿ ಹುರಕಡ್ಲಿ

೦೯. ಭಾಷೆ ಮತ್ತು ಸಾಹಿತ್ಯಕ್ಕೆ ಬಿಜಾಪುರದ ಆದಿಲ್‌ಷಾಹಿಗಳ ಕೊಡುಗೆಗಳು ..51
– ಡಾ. ಶ್ರೀಧರ ಚಿ. ಕಾಂಬಳೆ

೧೦. ನಿರಂತರ ಓದುಗರನ್ನು ಹೊಂದಿದ ದಿನಪತ್ರಿಕೆ ಸಾಹಿತ್ಯ ..54
– ಡಾ. ನಾಗರಾಜ ಡಿ. ಮುರಗೋಡ

೧೧. ನಾಡವರು ಮತ್ತು ಆಧುನಿಕತೆ ..58
– ಆಶಾಲತಾ ಜಿ. ನಾಯಕ

೧೨. ವಚನ ಸಾಹಿತ್ಯ ಮತ್ತು ಸ್ತ್ರೀಸಂವೇದನೆ ..65
– ಮಂಗಳಾ ಬಿ. ಎನ್.

೧೩. ೧೮೩೧ರ ನಗರ ರೈತ ದಂಗೆ : ಬೂದಿ ಬಸಪ್ಪನ ನಾಯಕತ್ವದ ಅವಲೋಕನ ..71
– ನರಸಿಂಹ ಮೂರ್ತಿ ಟಿ. ಎಸ್.

೧೪. ವಿಶೇಷಚೇತನರ ಸಬಲೀಕರಣದಲ್ಲಿ "ಕಲ್ಯಾಣ ಕರ್ನಾಟಕ"ದ ಪಾತ್ರ–ಒಂದು ಅವಲೋಕನ ..77
– ಶಂಕರಲಿಂಗ ಟವಳಿ

ಸಾಹಿತ್ಯ, ಕಲೆ, ಸಂಸ್ಕೃತಿ, ರಂಗಭೂಮಿ, ಜನಪದ, ಶಿಕ್ಷಣ ಹೀಗೆ ಹಲವಾರು ಕ್ಷೇತ್ರಗಳ ಜೊತೆಗೆ ಪರಿಸರ ರಕ್ಷಣೆ ಹಾಗೂ ಸಮಾಜಕ್ಕೆ ನಿಸ್ವಾರ್ಥ ಸೇವೆ ಸಲ್ಲಿಸುವುದು ಪ್ರತಿಷ್ಠಾನದ ಮುಖ್ಯ ಉದ್ದೇಶ. ಈ ಉದ್ದೇಶದೊಂದಿಗೆ ೨೦೧೬ ರಿಂದ ಕಾರ್ಯ ಪ್ರವೃತ್ತವಾದರೂ ೨೦೧೮ ಡಿಸೆಂಬರ್ ೪ ರಂದು ಭೂಮಿ ಪ್ರತಿಷ್ಠಾನವು ನೋಂದಣಿಯಾಗಿದೆ.

'ಭೂಮಿಯು ಎಲ್ಲರಿಗಾಗಿ ಎಲ್ಲರೂ ಭೂಮಿಗಾಗಿ' ಇದು ಪ್ರತಿಷ್ಠಾನದ ಧ್ಯೇಯ ವಾಕ್ಯ. 'ಅಕ್ಷರ ಕ್ರಾಂತಿಯ ಜೊತೆಗೆ ವೃಕ್ಷ ಕ್ರಾಂತಿ. ನುಡಿ ಸೇವೆಯ ಜೊತೆಗೆ ನಾಡಿನ ಸೇವೆ' ಎಂಬ ದೂರದೃಷ್ಟಿಯೊಂದಿಗೆ ನಿಸ್ವಾರ್ಥ ಹಾಗೂ ಪ್ರಾಮಾಣಿಕ ಸೇವೆಯ ಸಾಮಾಜಿಕ ಕಳಕಳಿಯುಳ್ಳ ಸಂಘಟನೆಯೇ ನಮ್ಮ ಸಾಮರ್ಥ್ಯ. ಭೂಮಿಯ ರಕ್ಷಣೆ ಪರಮ ಗುರಿ. ಭೂಮಿ ಮೇಲೆ ವಾಸಿಸುವ ಸರ್ವ-ರಿಗೂ ಸಮನಾದ ಅವಕಾಶ ನೀಡುವುದು. ಹಲವಾರು ರಂಗಗಳಲ್ಲಿ ಪ್ರತಿಭಾವಂತ ಸೃಜನಶೀಲ ಮನಸ್ಸುಗಳಿಗೆ ವೇದಿಕೆಯನ್ನು ಕಲ್ಪಿಸಿಕೊಡಬೇಕೆಂಬ ಉದ್ದೇಶಗಳನ್ನು ಹೊಂದಿ ಈಗಾಗಲೇ ಮೂರು ವರ್ಷಗಳಿಂದ ಹಲವಾರು ಸದಭಿರುಚಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಸಮಾಗಮ, ಅರಿವಿನ ಪಯಣ, ಹಸಿರು ಭೂಸಿರಿ, ಧರಣಿಮಂಡಲ ಹೀಗೆ ಹಲವು ಕಾರ್ಯಕ್ರಮಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆತ ಕಾರಣ ಈಗ 'ಪುನರ್ನವ' ಎಂಬ ಸಂಶೋಧನಾ ನಿಯತಕಾಲಿಕೆ ಹೊರತರಲು ಸರ್ವ ರೀತಿಯ ಪ್ರಯತ್ನಗಳು ಯೋಜಿತ ರೀತಿಯಲ್ಲಿ ನಡೆಯುತ್ತಿದೆ. ಇಂತಹ ಪ್ರಯತ್ನಗಳಿಗೆ ಮುನ್ನುಡಿಯೇ 'ಪುನರ್ನವ' ರಾಷ್ಟ್ರೀಯ ವಿಚಾರ ಸಂಕಿರಣ. ಒಟ್ಟಾರೆ ಸೃಜನಶೀಲ ಮನಸ್ಸುಗಳನ್ನು ಒಗ್ಗೂಡಿಸುವ ಕನಸು ನಮ್ಮದು.

ಸೃಜನಶೀಲರು, ಸಾಹಿತ್ಯಾಸಕ್ತರು, ಸಂಸ್ಕೃತಿ ಆರಾಧಕರು, ಪರಿಸರ ಪ್ರಿಯರು ಹಾಗೂ ಸಹೃದಯ ಆಸಕ್ತರಿಗೆ ಭೂಮಿ ಪ್ರತಿಷ್ಠಾನದ ಸದಸ್ಯರಾಗಲು ಮುಕ್ತ ಅವಕಾಶ ಕಲ್ಪಿಸಲಾಗಿದೆ. ತಾವು ನಮ್ಮ ಜೊತೆಗೆ ಈ ಸೇವೆಯಲ್ಲಿ ಕೈಜೋಡಿಸುವಿರೆಂದು ಭಾವಿಸಿದ್ದೇವೆ. ಬನ್ನಿ ನಾವೆಲ್ಲರೂ ಭೂಮಿಯ ಸೇವೆಗೆ ಒಂದಾಗೋಣ.

– ಭೂಮಿ ಪ್ರತಿಷ್ಠಾನ, ಧಾರವಾಡ



978-81-939340-6-7

ಬೆಲೆ : 300/-

ಬಸು ಪ್ರಕಾಶನ,
ಧಾರವಾಡ